ಊ) ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 252 ದ್ವಿತೀಯ ದರ್ಜೆ ಸಹಾಯಕರು ಹಾಗೂ 202 ಇಲಾಖೆಯ ಕರಡು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪ್ರಥಮ ದರ್ಜೆ ಸಹಾಯಕರ ಪದವೃಂದಕ್ಕೆ ಪದೋನ್ನತಿ ಹೊಂದುವಾಗ 10:1 ಅನುಪಾತವನ್ನು ಅನುಸರಿಸುತ್ತಿರುವುದು ಸರಿಯೇ?

ಶ್ರೀ ಪ್ರಕಾಶ್ ಬಾ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು):

ಅ) ಹೌದು.

ಆ) ದಿನಾಂಕ 30.10.1975ರ ಸರ್ಕಾರಿ ಕಾರ್ಯಕಾರಿ ಆದೇಶದ ಸಂಖ್ಯೆ: ಆರ್.ಡಿ.ಸಿ./100/ಸಿಎಂಡಿ/74 ರನ್ವಯ ಈವರೆಗೆ ಬೆರಳಚ್ಚುಗಾರರ ಪದವೃಂದದಿಂದ 185 ನೌಕರರುಗಳಿಗೆ ಪ್ರಥಮ ದರ್ಜೆ ಸಹಾಯಕರ ಪದವೃಂದಕ್ಕೆ ಪದೋನ್ನತಿ ನೀಡಲಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಇಲಾಖೆಯಲ್ಲಿ ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಳವಡಿಸಲು ಕ್ರಮ ವಹಿಸಿರುವುದರಿಂದ ನಿಯಮಗಳನುಸಾರ ಪದೋನ್ನತಿ ನೀಡುವ ಬಗ್ಗೆ ಕ್ರಮ ವಹಿಸಲಾಗುವುದು. ಈ ಮಧ್ಯಂತರ ಅವಧಿಯಲ್ಲಿ ಪದೋನ್ನತಿಗಳನ್ನು ನೀಡಲಾಗುತ್ತಿಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಳವಡಿಸಿಕೊಳ್ಳಲು ಕ್ರಮ ಜರುಗಿಸಲಾಗಿದೆ.

5600(6332) : ಶ್ರೀ ಪದ್ಮನಾಭ ಕೊಟ್ಟಾರಿ.ಕೆ. (ವಿಟ್ಲ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಪಿಎಲ್ ಪಡಿತರ ಕಾರ್ಡ್‌ಗಳ ಫಲಾನುಭವಿಗಳ ಗುರುತಿಸುವಿಕೆಯ ಕಾರ್ಯವು ಮುಕ್ತಾಯಗೊಂಡಿದೆಯೇ; (ವಿವರ ನೀಡುವುದು);

ಆ) ವಿಟ್ಲ ಕ್ಷೇತ್ರದಲ್ಲಿ ಎಷ್ಟು ಜನರಿಗೆ ಬಿ.ಪಿ.ಎಲ್. ಕಾರ್ಡ್‌ಗಳನ್ನು ಹಂಚಲಾಗಿದೆ;

ಇ) ಸರ್ವೇ ಕಾರ್ಯ ನಂತರ ನೀಡುವ ಬಿಪಿಎಲ್ ಮತ್ತು ಎಪಿಎಲ್ ಕಾರ್ಡ್‌ಗಳನ್ನು ಹೊಸದಾಗಿ ಹಂಚಲಾಗುವುದೇ;

ಈ) ಬಡವರಿಗೆ ಪಡಿತರ ಕಾರ್ಡ್‌ಗಳನ್ನು ಹಂಚುವ ಕಾರ್ಯದಲ್ಲಿ ವಿಳಂಬ ತಡೆಗಟ್ಟಲು ಸರ್ಕಾರದ ಕ್ರಮವೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಬಿಪಿಎಲ್ ಫಲಾನುಭವಿಗಳನ್ನು ಗುರುತಿಸುವ ಕಾರ್ಯ ಮುಕ್ತಾಯ ಹಂತದಲ್ಲಿದ್ದು, ಗ್ರಾಮ ಸಭೆಗಳಲ್ಲಿ ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆಗೆ ಮಂಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಆ) ವಿಟ್ಲ ಕ್ಷೇತ್ರದಲ್ಲಿ ಜೂನ್, 2005ರ ಅಂತ್ಯಕ್ಕೆ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳ ವಿವರಗಳು ಕೆಳಕಂಡಂತಿರುತ್ತದೆ.

ಎ.ಎ.ವೈ	–	1604
ಹಳದಿ ಪ.ಚೀ.	–	15706
ಒಟ್ಟು	–	17310

ಇ) ಹೌದು.

ಈ) ಸಮೀಕ್ಷಾ ಕಾರ್ಯ ಅಂತಿಮ ಹಂತದಲ್ಲಿದ್ದು ಅರ್ಹ ಫಲಾನುಭವಿಗಳಿಗೆ ಗಣಕೀಕೃತ ಪಡಿತರ ಚೀಟಿ ನೀಡಲು ಅಗತ್ಯ ಕ್ರಮ ಜರುಗಿಸಲಾಗುತ್ತಿದೆ.

5601(6472) : ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಯುತ್ತಿರುವ ತೋಟಗಾರಿಕೆ ಬೆಳೆಗಳು ಮತ್ತು ಅವುಗಳ ವಾರ್ಷಿಕ ಪ್ರಮಾಣ ಎಷ್ಟು;

ಆ) ಜಿಲ್ಲೆಯ ತೋಟಗಾರಿಕಾ ಬೆಳೆಗಳಾದ ಅಡಿಕೆ, ತೆಂಗು, ಗೇರು ಮುಂತಾದ ತೋಟಗಾರಿಕಾ ಬೆಳೆಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಜಿಲ್ಲೆಯಲ್ಲಿ ತೋಟಗಾರಿಕೆ ಕೃಷಿಗೆ ವಿಫುಲ ಅವಕಾಶಗಳಿದ್ದರೂ ಇಲಾಖೆಯವರು ಗಣನೀಯ ಪ್ರಮಾಣದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲು ಮುಂದಾಗದಿರಲು ಕಾರಣಗಳೇನು;

ಈ) ಇಲಾಖೆಯು ಜಿಲ್ಲೆಯಾದ್ಯಂತ ಸಾಕಷ್ಟು ಜಮೀನನ್ನು ಹೊಂದಿದ್ದು ಅವುಗಳನ್ನು ಬಳಸಿಕೊಂಡು ತೋಟಗಾರಿಕೆ ಬೆಳೆ ಕುರಿತಾದ ಸಂಶೋಧನೆ, ತೋಟಗಾರಿಕೆ ಬೆಳೆಗಳ ಉತ್ತಮ ತಳಿಯ ಗಿಡಗಳ ಉತ್ಪಾದನೆ ಮತ್ತು ವಿತರಣೆಯನ್ನು ಕೈಗೊಳ್ಳಲು ಮುಂದಾಗುವುದೇ;

ಉ) ಇಲಾಖೆಯ ದಶದಲ್ಲಿರುವ ಜಮೀನಿನಲ್ಲಿ ಸರ್ಕಾರವೇ ತೋಟಗಾರಿಕೆ ಬೆಳೆಯನ್ನು ಬೆಳೆಯುವ ಅಥವಾ ಸಂಘ ಸಂಸ್ಥೆಗಳಿಗೆ ಆ ಜವಾಬ್ದಾರಿಯನ್ನು ವಹಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದೇ;

ಊ) ದಕ್ಷಿಣ ಕನ್ನಡ ಜಿಲ್ಲೆಯನ್ನು ತೋಟಗಾರಿಕೆ ಜಿಲ್ಲೆ ಎಂದು ಪರಿಗಣಿಸಿ ಅಭಿವೃದ್ಧಿಪಡಿಸುವ ದಿಶೆಯಲ್ಲಿ ಸರಕಾರದ ಕ್ರಮಗಳೇನು?

ಶ್ರೀ ಕೆ. ಶ್ರೀನಿವಾಸಗೌಡ (ತೋಟಗಾರಿಕೆ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಮುಖವಾಗಿ ಅಡಿಕೆ, ತೆಂಗು, ಗೋಡಂಬಿ, ಕೋಕೋ, ಕರಿಮೆಣಸು, ಬಾಳೆ, ಮಾವು, ಹಲಸು, ಬದನೆ, ಮರಗೆಣಸು, ಕುಂಬಳಜಾರಿ ತರಕಾರಿಗಳು, ಆರ್ಕಿಡ್, ಔಷಧೀಯ ಮತ್ತು ಸುಗಂಧಿತ ಬೆಳೆ ಇತ್ಯಾದಿ ತೋಟಗಾರಿಕೆ ಬೆಳೆಗಳನ್ನು ಬೆಳೆಸಲಾಗುತ್ತಿದೆ. ಅವುಗಳನ್ನು ಒಟ್ಟು 97721 ಹೆ. ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ವಾರ್ಷಿಕ ಉತ್ಪಾದನೆ 2.45 ಲಕ್ಷ ಟನ್‌ಗಳಷ್ಟಿದೆ.

ಆ) ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಅಡಿಕೆ ಬೆಳೆಗಾರರಿಗೆ ಆದಾಯ ಹೆಚ್ಚಿಸುವ ದೃಷ್ಟಿಯಿಂದ ಅಡಿಕೆ ತೋಟಗಳಲ್ಲಿ ಅಂತರ ಬೆಳೆಯಾಗಿ ಕಾಳುಮೆಣಸು ಮತ್ತು ಕೊಕೋ ಬೆಳೆಸಲು ವಿವಿಧ ಕಾರ್ಯಕ್ರಮಗಳ ಮೂಲಕ ಪ್ರೋತ್ಸಾಹ ನೀಡಲಾಗುತ್ತಿದೆ.
2. ಬಿಳಿಚಾಲಿ ಅಡಿಕೆ ಮತ್ತು ಕೆಂಪು ಅಡಿಕೆಗಳನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ಕ್ರಮವಹಿಸಲಾಗಿದೆ.